ಇಂದು ದಿ**: 13.08.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಮುಂದುವರೆದ ಪಾಟೀ ಸವಾಲು ವಾದಿಗಳ ಪರಃ ಶ್ರೀ ಎನ್ ಜಿ **.,** ವಕೀಲರಿಂದ

ಸಾಕ್ಷಿಗೆ ವಾದಿಗಳ ಪರ ವಕೀಲರು ದಿಃ 06.09.2019 ರ ನೊಂದಾಯಿತ ಕ್ರಯ ಪತ್ರದ ಛಾಯಾಪ್ರತಿಯನ್ನು ತೋರಿಸಿ ಅದರಲ್ಲಿ ನಿಮ್ಮ ತಂದೆಯ ಸಹಿ ತೋರಿಸು ಎಂದು ಕೇಳಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ, ಅದರಲ್ಲಿ ನಮ್ಮ ತಂದೆಯ ಸಹಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ವಾದಿಗಳ ಪರ ವಕೀಲರು ನಿಡಿಃ 2 ನ್ನು ತೋರಿಸಿ, ಅದರಲ್ಲಿ ನಿಮ್ಮ ತಂದೆಯ ಸಹಿ ತೋರಿಸು ಎಂದು ಕೇಳಲಾಗಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ, ಅದರಲ್ಲಿ ನಮ್ಮ ತಂದೆಯ ಸಹಿ ಇಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ವಾದಿಗಳ ಪರ ವಕೀಲರು ಪಡಿತರ ಚೀಟಿಯನ್ನು ತೋರಿಸಿ ಅದರಲ್ಲಿ ನಿಮ್ಮ ತಂದೆಯ ಫೋಟೋ ಇದೆ ಎಂದು ಹೇಳಲಾಗಿ, ಸಾಕ್ಷಿ ಸದರಿ ಪಡಿತರ ಚೀಟಿಯನ್ನು ನೋಡಿ, ಅದರಲ್ಲಿ ನಮ್ಮ ತಂದೆಯ ಫೋಟೋ ಇದೆ ಎಂದು ಹೇಳಿದ್ದರಿಂದ, ಸದರಿ ಪಡಿತರ ಚೀಟಿಯನ್ನು ನಿಪಿಃ13 ಎಂದು ಗುರುತಿಸಲಾಯಿತು. ಸಾಕ್ಷಿಗೆ ವಾದಿಗಳ ಪರ ವಕೀಲರು ನಿಪಿಃ 13 ಪಡಿತರ ಚೀಟಿಯ ಛಾಯಾಪ್ರತಿಯನ್ನು ತೋರಿಸಿ ಅದರಲ್ಲಿ ನಿಮ್ಮ ತಂದೆಯ ಫೋಟೋ ಇದೆ ಎಂದು ಹೇಳಲಾಗಿ, ಸಾಕ್ಷಿ ಸದರಿ ಪಡಿತರ ಚೀಟಿಯ ಛಾಯಪ್ರತಿಯನ್ನು ನೋಡಿ, ಅದರಲ್ಲಿ ನಮ್ಮ ತಂದೆಯ ಫೋಟೋ ಇದೆ ಎಂದು ಹೇಳುತ್ತಾರೆ. ನಿಡಿಃ 2 ರಲ್ಲಿರುವ ಫೋಟೋ ಹಾಗೂ ನಿಪಿಃ 13 ರಲ್ಲಿರುವ ಫೋಟೋ ನಮ್ಮ ತಂದೆಯ ಪೋಟೋ ಎಂದರೆ ಸಾಕ್ಷಿ ಎರಡು ಬೇರೆ ಬೇರೆ ಎಂದು ಹೇಳುತ್ತಾರೆ. ನಿಡಿಃ 2 ರಲ್ಲಿರುವ ಶಿವಣ್ಣ ಜೀವಂತವಾಗಿ ಇರುವುದಿಲ್ಲ. ಸದರಿ ಶಿವಣ್ಣ ಯಾವಾಗ ಮೃತಪಟ್ಟಿರುತ್ತಾನೆ ಎಂದು ಗೊತ್ತಿರುವುದಿಲ್ಲ. ಸದರಿ ಶಿವಣ್ಣ 2022 ರ ಹಿಂದೆ ಯಾವಾಗ ಮೃತಪಟ್ಟಿರುತ್ತಾನೆ ಎಂದು ಗೊತ್ತಿರುವುದಿಲ್ಲ. ದಾವಾ ಆಸ್ತಿಗಳು ವಾದಿಗಳು ಮತ್ತು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸಾಕ್ಷಿ ಸರ್ವೆ ನಂ. 23/1 ಬಿ ಜಮೀನನ್ನು ಹೊರತುಪಡಿಸಿ ಉಳಿದ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಹೇಳುತ್ತಾರೆ. ನಮ್ಮ ತಂದೆಯ ತಂದೆಯ ಹೆಸರನ್ನು ನಾನು ಬದಲಾವಣೆ ಮಾಡಿ ನಿಡಿಃ 2 ರಂತೆ ಕ್ರಯ ಪತ್ರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿಃ 2 ರಲ್ಲಿರುವ ಶಿವಣ್ಣ ನನಗೆ ಕ್ರಯ ಪತ್ರ ಬರೆದುಕೊಡಲು ಹಕ್ಕನ್ನುಹೊಂದಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ವಾದಿಗಳ ಪರ ವಕೀಲರು ಆಧಾರ್ ಕಾರ್ಡ್ ಮತ್ತು ಮತದಾರರ ಪಟ್ಟಿಯ ಛಾಯಾಪ್ರತಿಗಳನ್ನು ತೋರಿಸಿ ಅದರಲ್ಲಿ ನಿಮ್ಮ ತಂದೆಯ ಫೋಟೋ ಇದೆ ಎಂದು ಹೇಳಲಾಗಿ, ಸಾಕ್ಷಿ ಸದರಿ ಆಧಾರ್ ಕಾರ್ಡ್ ಮತ್ತು ಮತದಾರರ ಪಟ್ಟಿಯ ಛಾಯಾಪ್ರತಿಗಳನ್ನು ನೋಡಿ, ಅದರಲ್ಲಿ ನಮ್ಮ ತಂದೆಯ ಫೋಟೋ ಇದೆ ಎಂದು ಹೇಳಿರುವುದರಿಂದ, ಸದರಿ ಆಧಾರ್ ಕಾರ್ಡ್ ಮತ್ತು ಮತದಾರರ ಪಟ್ಟಿಯ ಛಾಯಾಪ್ರತಿಗಳನ್ನು ನಿಪಿಃ 14 ಮತ್ತು 15 ಎಂದು ಗುರುತಿಸಲಾಯಿತು. ವಾದಿಯರಿಗೆ ಮೋಸ ಮಾಡುವ ಸಲುವಾಗಿ ನಾನು ಮತ್ತು ನಮ್ಮ ತಂದೆ ಸೇರಿ ನಿಡಿಃ 2 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಡಿಃ 2 ರಲ್ಲಿರುವ ಆಸ್ತಿಯು ವಾದಿಗಳ ಮತ್ತು ನಮ್ಮ ಒಟ್ಟು

ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

(ವೈ.ಕೆ ಬೇನಾಳ್ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.